ಶ್ರೀ ಜಗದೀಶ್ ಶೆಟ್ಟರ್: ಯಲ್ಲಾಪುರ ಮತ್ತು ಮುಂಡಗೋಡ ತಾಲ್ಲೂಕುಗಳಿಗೆ ಸಂಬಂಧಪಟ್ಟಂತೆ ಪ್ರಶ್ನೆ ಕೇಳಿದ್ದಾರೆ. ಅದಕ್ಕೆ ಹಣ ಬಿಡುಗಡೆ ಮಾಡದೇ ಇರುವುದರಿಂದ ಈ ಉದ್ಯೋಗ ಖಾತ್ರಿ ಕಾಮಗಾರಿ ಪ್ರಗತಿಯಾಗದೆ ಕೂಲಿ ಕಾರ್ಮಿಕರಿಗೆ ತೊಂದರೆಯಾಗಿದೆ ಎಂದು ಹೇಳಿದ್ದಾರೆ. ಅದರ ಬಗ್ಗೆ ಈಗಾಗಲೇ ನಮ್ಮ ಅಧಿಕಾರಿಗಳು ಅಲ್ಲಿ ಎಷ್ಟು ಕೆಲಸ ಆಗಿದೆ ಎನ್ನುವುದನ್ನು ಪರಿಶೀಲನೆ ಮಾಡಿ ಹಣ ಬಿಡುಗಡೆ ಮಾಡುವ ಕ್ರಮ ಕೈಗೊಂಡಿದ್ದಾರೆ.

23 (137) ಶ್ರೀ ಲಾಲಾಜಿ ಆರ್. ಮೆಂಡನ್ (ಕಾಪು) ಇವರು ಗೈರು ಹಾಜರಾಗಿದ್ದರು.

ಭದ್ರಾವತಿ ಕ್ಷೇತ್ರಕ್ಕೆ ನಾಲ್ಕು ಪ್ರೌಢಶಾಲೆ ಮಂಜೂರಾತಿ

24 (310) ಶ್ರೀ ಸಂಗಮೇಶ್ವರ ಬಿ.ಕೆ (ಭದ್ರಾವತಿ) :– ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

(ಅ) ಭದ್ರಾವತಿ ವಿಧಾನಸಭಾ ಕ್ಷೇತ್ರದ ಗ್ರಾಮಾಂತರ ಪ್ರದೇಶಗಳಲ್ಲಿ ನಾಲ್ಕು ಸರ್ಕಾರಿ ಪ್ರೌಢಶಾಲೆಗಳ ಅವಶ್ಯಕತೆ ಇರುವುದು ಹಾಗೂ ಮಂಜೂರಾತಿ ಪ್ರಸ್ತಾವನೆಯು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಹಾಗಿದ್ದಲ್ಲಿ, ಮಂಜೂರಾತಿ ನೀಡದೇ ಇರಲು ಕಾರಣಗಳೇನು;

(ಇ) ಯಾವಾಗ ಪ್ರೌಢಶಾಲೆಗಳಿಗೆ ಮಂಜೂರಾತಿ ನೀಡಲಾಗುವುದು?

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು.

(ಅ) ಬಂದಿದೆ.

2008–09 ನೇ ಸಾಲಿನಲ್ಲಿ ಭದ್ರಾವತಿ ತಾಲ್ಲೂಕಿನಲ್ಲಿ ದೊಡ್ಡೇರಿ, ಕಂಬದಾಳ್, ಕೂಡ್ಲಿಗೆರೆ ಮತ್ತು ದೊಣಬಗಟ್ಟ ಗ್ರಾಮಗಳಲ್ಲಿ ಹೊಸ ಶಾಲೆ ಪ್ರಾರಂಭಿಸಲು ಪ್ರಸ್ತಾವನೆಗಳು ಬಂದಿರುತ್ತವೆ.

(ಆ) ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನ ಕಾರ್ಯಕ್ರಮದಲ್ಲಿ ಶಾಲೆಗಳನ್ನು ಉನ್ನತೀಕರಿಸಲು ಈ ಕೆಳಗಿನ ನಿಯಮಗಳನ್ನು ಅನುಸರಿಸಲಾಗುತ್ತಿದೆ. 5 ಕಿ.ಮೀ ವ್ಯಾಪ್ತಿಯೊಳಗೆ ಸರ್ಕಾರಿ ಹಾಗೂ ಅನುದಾನಿತ ಪ್ರೌಢಶಾಲೆಗಳು ಇರಬಾರದು. 8ನೇ ತರಗತಿ ಹೊಂದಿರುವ ಹಿರಿಯ ಪ್ರಾಥಮಿಕ ಶಾಲೆಗಳನ್ನು 9 ನೇ ತರಗತಿಯೊಂದಿಗೆ ಉನ್ನತೀಕರಿಸಲು ಅವಕಾಶವಿರುತ್ತದೆ.

* 9ನೇ ತರಗತಿಗೆ 70 ಮಕ್ಕಳು ದಾಖಲಾಗುವಂತಿರಬೇಕು.

* ಶೈಕ್ಷಣಿಕವಾಗಿ ಹಿಂದುಳಿದ ಬ್ಲಾಕುಗಳ ಶಾಲೆಗಳಲ್ಲಿ /ಮೈನಾರಿಟಿ ಶಾಲೆಗಳಲ್ಲಿ ಕನಿಷ್ಠ 50 ಮಕ್ಕಳು ದಾಖಲಾಗುವಂತಿರಬೇಕು.

* ಕಟ್ಟಡ ನಿರ್ಮಾಣಕ್ಕೆ ಅವಶ್ಯ ನಿವೇಶನ ಇರಬೇಕು.

* ಜಿಲ್ಲಾ ಉಪ ನಿರ್ದೇಶಕರು ಪ್ರತಿ ವರ್ಷ ವಾರ್ಷಿಕ ಯೋಜನೆಯನ್ನು ಸಿದ್ದಪಡಿಸಿ ಸಲ್ಲಿಸಬೇಕಾಗಿದ್ದು ಈ ಯೋಜನೆಯಲ್ಲಿ ಬರುವ ಪ್ರಸ್ತಾವನೆಯನ್ನು ಕೇಂದ್ರ ಸರ್ಕಾರಕ್ಕೆ ಸಲ್ಲಿಸಿ ಅನುಮೋದನೆ ಪಡೆಯಲಾಗುವುದು.

ದೊಡ್ಡೇರಿ ಹಿರಿಯ ಪ್ರಾಥಮಿಕ ಶಾಲೆ: ಈ ಶಾಲೆಯಲ್ಲಿ 8ನೇ ತರಗತಿಯಲ್ಲಿ 24 ಮಕ್ಕಳಿದ್ದು, ಸುತ್ತಮುತ್ತಲಿನ ಗ್ರಾಮಗಳಿಂದ 22 ಮಕ್ಕಳು ಒಟ್ಟು 46 ಮಕ್ಕಳು 9ನೇ ತರಗತಿಗೆ ದಾಖಲಾಗುವ ಸಂಭವ ಇರುತ್ತದೆ ಪ್ರಸ್ತುತ ನಿಯಮದಡಿಯಲ್ಲಿ ಈ ಶಾಲೆಯನ್ನು ಉನ್ನತೀಕರಿಸಲು ಅವಕಾಶವಿರುವುದಿಲ್ಲ.

ಕಂಬದಾಳ್ ಹೊಸೂರ್ ಹಿರಿಯ ಪ್ರಾಥಮಿಕ ಶಾಲೆ: ಈ ಶಾಲೆಯಲ್ಲಿ 8ನೇ ತರಗತಿಯಲ್ಲಿ 32 ಮ್ಕಕಳಿದ್ದು, ಸುತ್ತಮುತ್ತಲಿನ ಗ್ರಾಮಗಳಿಂದ 34 ಮಕ್ಕಳು ಒಟ್ಟು 66 ಮಕ್ಕಳು 9ನೇ ತರಗತಿಗೆ ದಾಖಲಾಗುವ ಸಂಭವ ಇರುತ್ತದೆ. ಆದರೆ, 5 ಕಿ.ಮೀ ವ್ಯಾಪ್ತಿಯೊಳಗೆ ವೀರಭದ್ರೇಶ್ವರ ಅನುದಾನಿತ ಪ್ರೌಢಶಾಲೆ ಗೊಣಿಬೀಡು ಇರುವುದರಿಂದ ಈ ಸ್ಥಳದಲ್ಲಿ ಶಾಲೆಯನ್ನು ಉನ್ನತೀಕರಿಸಲು ಅವಕಾಶವಿರುವುದಿಲ್ಲ.

ಕೂಡ್ಲಿಗೆರೆ ಹೊಸೂರು ಹಿರಿಯ ಪ್ರಾಥಮಿಕ ಶಾಲೆ: ಈ ಶಾಲೆಯಲ್ಲಿ 8ನೇ ತರಗತಿಯು ಇರುವುದಿಲ್ಲವಾದ್ದರಿಂದ ಹಾಗೂ ಇದೇ ಗ್ರಾಮದಲ್ಲಿ ಹರಿಹರೇಶ್ವರ ಅನುದಾನಿತ ಪ್ರೌಢಶಾಲೆ ಇರುವುದರಿಂದ ಈ ಸ್ಥಳದಲ್ಲಿ ಶಾಲೆಯನ್ನು ಉನ್ನತೀಕರಿಸಲು ಅವಕಾಶವಿರುವುದಿಲ್ಲ.

ದೊಣಬಗಟ್ಟ ಹಿರಿಯ ಪ್ರಾಥಮಿಕ ಶಾಲೆ : ಈ ಶಾಲೆಯಲ್ಲಿ 8ನೇ ತರಗತಿಯಲ್ಲಿ 30 ಮಕ್ಕಳಿದ್ದು, ಸುತ್ತಮುತ್ತಲಿನ ಗ್ರಾಮಗಳಿಂದ 25 ಮಕ್ಕಳು ಒಟ್ಟು 55 ಮಕ್ಕಳು 9ನೇ ತರಗತಿಗೆ ದಾಖಲಾಗುವ ಸಂಭವ ಇರುತ್ತದೆ. 2011–12 ನೇ ಸಾಲಿನ ಆರ್.ಎಮ್.ಎಸ್.ಎ ವಾರ್ಷಿಕ ಯೋಜನೆಯಲ್ಲಿ ಈ ಶಾಲೆಯನ್ನು ಉನ್ನತೀಕರಿಸಲು ಪ್ರಸ್ತಾವನೆಯನ್ನು ಕೇಂದ್ರ ಸರ್ಕಾರಕ್ಕೆ ಸಲ್ಲಿಸಿದೆ. ಅನುಮೋದನೆ ದೊರಕಿದ ನಂತರ ಶಾಲೆಯನ್ನು ಉನ್ನತೀಕರಿಸಲಾಗುವುದು.

ದೊಣಬಗಟ್ಟ ಹಿರಿಯ ಪ್ರಾಥಮಿಕ ಶಾಲೆ: 2011–12 ನೇ ಸಾಲಿನ ಆರ್.ಎಮ್.ಎಸ್.ಎ ವಾರ್ಷಿಕ ಯೋಜನೆಯಲ್ಲಿ ಈ ಶಾಲೆಯನ್ನು ಉನ್ನತೀಕರಿಸಲು ಪ್ರಸ್ತಾವನೆಯನ್ನು ಕೇಂದ್ರ ಸರ್ಕಾರಕ್ಕೆ ಸಲ್ಲಿಸಿದೆ. ಅನುಮೋದನೆ ದೊರಕಿದ ನಂತರ ಶಾಲೆಯನ್ನು ಉನ್ನತೀಕರಿಸಲಾಗುವುದು.

ಶ್ರೀ ಬಿ.ಕೆ ಸಂಗಮೇಶ್ವರ: ನಮ್ಮ ಕ್ಷೇತ್ರದಲ್ಲಿರುವ ಬೇಡಿಕೆಗಳ ಬಗ್ಗೆ ಪ್ರಶ್ನೆ ಕೇಳಿದ್ದರೆ ಕೇವಲ ಅಂತೆಕಂತೆ ಎನ್ನುವ ಉತ್ತರ ಕೊಟ್ಟಿದ್ದಾರೆ. ಅದಾಗಬಾರದು. ಆ ಕ್ಷೇತ್ರ ಮಕ್ಕಳ ಸಂಖ್ಯೆಗನುಗುಣವಾಗಿ ಹೈಸ್ಕೂಲುಗಳನ್ನು ತೆರೆಯಬೇಕೆಂದು ಕೇಳಿದ್ದೇವೆ. ದಯವಿಟ್ಟು, ನಮ್ಮ ಸಚಿವರು ಕೇಂದ್ರ ಸರ್ಕಾರದ ಜೊತೆ ಮಾತನಾಡಿ RMSA ಯೋಜನೆಯಲ್ಲಿ ಕೆಲವು ಯೋಜನೆಗಳಿವೆ, ಅದರಲ್ಲಿ ಮಂಜೂರು ಮಾಡಿ ಮಕ್ಕಳಿಗೆ ಅನುಕೂಲ ಮಾಡಿಕೊಡಬೇಕೆಂದು ತಮ್ಮ ಮೂಲಕ ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಮಾನ್ಯ ಸದಸ್ಯರು ಭದ್ರಾವತಿ ವಿಧಾನಸಭಾ ಕ್ಷೇತ್ರದಲ್ಲಿ ಹೈಸ್ಕೂಲಿನ ಅವಶ್ಯಕತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಎಂದು ಕೇಳಿದ್ದಾರೆ. ಅವರ ಬೇಡಿಕೆ ಸರ್ಕಾರದ ಗಮನಕ್ಕೆ ಬಂದಿದೆ ಎಂದು ಹೇಳಿದ್ದೇವೆ. ಆದರೆ, ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಯೋಜನೆಯಡಿಯಲ್ಲಿ ಹೇಗೆ ಹೈಸ್ಕೂಲುಗಳನ್ನು ಉನ್ನತೀಕರಿಸುತ್ತಾರೆನ್ನುವ ವಿವರಗಳನ್ನು ತಿಳಿಸಿದ್ದೇವೆ. ಅದರ ಹಿನ್ನೆಲೆಯಲ್ಲಿ ನಾವು ಈ ಅಗತ್ಯ ಪ್ರಸ್ತಾವನೆಗಳನ್ನು ಸಿದ್ಧಪಡಿಸುತ್ತಿದ್ದೇವೆ. ನಾವು 2009–10ರಲ್ಲಿ ಸುಮಾರು 89 ಹೈಸ್ಕೂಲುಗಳನ್ನು, 2010–11ರಲ್ಲಿ ಸುಮಾರು 240 ಹೈಸ್ಕೂಲುಗಳನ್ನು ಈಗಾಗಲೇ ಉನ್ನತೀಕರಿಸಿದ್ದೇವೆ. ಈಗ ಕೇಂದ್ರ ಸರ್ಕಾರಕ್ಕೆ ಮತ್ತೆ 600 ಹೈಸ್ಕೂಲುಗಳನ್ನು ಉನ್ನತೀಕರಿಸಬೇಕೆನ್ನುವ ಪ್ರಸ್ತಾವನೆಯನ್ನು ಕಳುಹಿಸಿದ್ದೇವೆ. ಈ ವರ್ಷ ಪ್ರಸ್ತಾವನೆ ಕಳುಹಿಸಿದರೆ ಮುಂದಿನ ಶೈಕ್ಷಣಿಕ ವರ್ಷದಿಂದ ಅದನ್ನು ಉನ್ನತೀಕರಿಸುವುದಕ್ಕೆ ಅವಕಾಶಗಳಾಗುತ್ತವೆ. ನಾವು ಈಗಾಗಲೇ 89 ಮತ್ತು 240 ಇಷ್ಟು ಹೈಸ್ಕೂಲುಗಳನ್ನು ಉನ್ನತೀಕರಿಸಿದ್ದೇವೆ. ಹಾಗಾಗಿ, ಉಳಿದ ಸಂದರ್ಭಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆಗನುಗುಣವಾಗಿ, ಇಂತಿಷ್ಟು ವಿದ್ಯಾರ್ಥಿಗಳಿಗೆ ತಕ್ಕಂತೆ ಹೈಸ್ಕೂಲುಗಳನ್ನು ಉನ್ನತೀಕರಿಸಬೇಕೆಂದು ಕೇಂದ್ರ ಸರ್ಕಾರದ guidelines ಇದೆ. ಅಂಥದ್ದನ್ನಾಧರಿಸಿ, ಮುಂದಿನ ದಿನಗಳಲ್ಲಿ ಇಡೀ ರಾಜ್ಯದಲ್ಲಿಯೂ ಸಹ ಹೆಚ್ಚು ಹೆಚ್ಚು ಹೈಸ್ಕೂಲುಗಳನ್ನು ಉನ್ನತೀಕರಿಸುವುದಕ್ಕೆ ಕ್ರಮ ಕೈಗೊಳ್ಳುತ್ತೇವೆ. ಭದ್ರಾವತಿ ಕ್ಷೇತ್ರದಲ್ಲೂ ಸಹ ಈ ರೀತಿ guidelines ಪ್ರಕಾರ ವಿದ್ಯಾರ್ಥಿಗಳ ಸಂಖ್ಯೆ ಇದ್ದರೆ, ಅದನ್ನು ಉನ್ನತೀಕರಿಸುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಯು.ಟಿ. ಖಾದರ್: ರಾಜ್ಯ ಸರ್ಕಾರ ಬೇರ ಬೇರೆ ಕಡೆ ಹೈಸ್ಕೂಲುಗಳನ್ನು ಪ್ರಾರಂಭಿಸುತ್ತಿತ್ತು. ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನದಡಿಯಲ್ಲಿ ರಾಜ್ಯ ಸರ್ಕಾರ ಸ್ವಂತವಾಗಿ ಎಲ್ಲ ಕಡೆಯೂ ಹೈಸ್ಕೂಲುಗಳನ್ನು ಪ್ರಾರಂಭ ಮಾಡಬೇಡಿ ಎಂದು ಹೇಳಲಿಲ್ಲ. ಕೇಂದ್ರ ಸರ್ಕಾರ ಅವರದೇ ಒಂದು guidelines start ಮಾಡುತ್ತಾರೆ. ನಾವು ಕೇಳುವುದೇನೆಂದರೆ, ರಾಜ್ಯ ಸರ್ಕಾರ ಕನಿಷ್ಠ ಪ್ರತಿ ಗ್ರಾಮಕ್ಕೆ ಒಂದಾದರೂ ಹೈಸ್ಕೂಲ್ ಅನ್ನು ಮಂಜೂರು ಮಾಡುವ ವ್ಯವಸ್ಥೆ ಮಾಡಿ. ರಾಜ್ಯ ಶಿಕ್ಷಣ ಇಲಾಖೆ ಹೈಸ್ಕೂಲ್ ಅನ್ನು ಪ್ರಾರಂಭ ಮಾಡುವುದಿಲ್ಲ. ಒಂದು ಪಿಯುಸಿ ಕಾಲೇಜ್ ಪ್ರಾರಂಭ ಮಾಡುವುದಿಲ್ಲ. ಮತ್ತೆ ಏನು ಮಾಡುತ್ತಿದೆ? ಕೇವಲ ಸಂಬಳ ಕೊಡುತ್ತಿದ್ದರೆ ಆಗುವುದಿಲ್ಲ. ರಾಜ್ಯ ಸರ್ಕಾರದ ಶಿಕ್ಷಣ ಇಲಾಖೆಯಿಂದ ಒಂದು ಕ್ಷೇತ್ರಕ್ಕೆ ಕನಿಷ್ಠ ಎರಡು ಹೈಸ್ಕೂಲುಗಳನ್ನು ಮಂಜೂರು ಮಾಡಬೇಕೆಂದು ಕೇಳಿಕೊಳ್ಳುತ್ತೇವೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಇಡೀ ರಾಜ್ಯದಲ್ಲಿ ಹೈಸ್ಕೂಲುಗಳು ಹೆಚ್ಚು ಸಂಖ್ಯೆಯಲ್ಲಿ ಬೇಕು, ಜೂನಿಯರ್ ಕಾಲೇಜುಗಳು ಹೆಚ್ಚು ಸಂಖ್ಯೆಯಲ್ಲಿ ಬೇಕು ಎಂದಿದೆ. ಏಕೆಂದರೆ, ಶಿಕ್ಷಣವನ್ನು ಸಾರ್ವತ್ರೀಕರಣಗೊಳಿಸಬೇಕೆನ್ನುವುದು ಸರ್ಕಾರದ ನಿಶ್ಚಯವಾಗಿದೆ. ಪಾಲಕರಿಗೆ, ಮಕ್ಕಳು ಸಹಜವಾಗಿ ವಿವಿಧ ಹಂತದಲ್ಲಿ ಹೆಚ್ಚು ಹೆಚ್ಚು ಶಿಕ್ಷಣವನ್ನು ಪಡೆಯಬೇಕೆನ್ನುವ ಬಯಕೆಯೂ ಹಿಂದಿನದಕ್ಕಿಂತ ಇಂದಿನ ದಿನಗಳಲ್ಲಿ ಹೆಚ್ಚಾಗಿದೆ. ಆ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರವಾಗಿಯೂ ಅಗತ್ಯವಾಗಿ ಹೊಸ ಹೊಸ ಹೈಸ್ಕೂಲು ಕಾಲೇಜುಗಳನ್ನು ತೆರೆಯುವ ಪ್ರಯತ್ನವನ್ನು ನಾವು ಮಾಡುತ್ತೇವೆ. ಕೇಂದ್ರ ಸರ್ಕಾರದ ಯೋಜನೆಯಲ್ಲೂ ನಮ್ಮ ರಾಜ್ಯಕ್ಕೆ ಎಷ್ಟು ಹೆಚ್ಚು ಅನುಕೂಲತೆ ತೆಗೆದುಕೊಳ್ಳಬಹುದೋ ಆ ದಿಕ್ಕಿನಲ್ಲಿ ನಾವು ನಮ್ಮ ಪ್ರಯತ್ನ ಮಾಡುತ್ತೇವೆ.

ಗ್ರಾಮೀಣ ಕುಡಿಯುವ ನೀರಿನ ಯೋಜನೆ ನಿರ್ವಹಣೆ

25 (379) ಶ್ರೀ ಶಿವಲಿಂಗೇಗೌಡ. ಕೆ.ಎಂ (ಅರಸೀಕೆರೆ) :– ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

(ಅ) ರಾಜ್ಯದಲ್ಲಿ ರಾಜೀವ ಗಾಂಧಿ ರಾಷ್ಟ್ರೀಯ ಕುಡಿಯುವ ನೀರಿನ ಯೋಜನೆಯಡಿ ಗ್ರಾಮೀಣ ಪ್ರದೇಶಗಳಲ್ಲಿ ಕುಡಿಯುವ ನೀರನ್ನು ಒದಗಿಸಲು ಎಷ್ಟು ಯೋಜನೆಗಳನ್ನು ಕೈಗೊಳ್ಳಲಾಗಿದೆ.